O.S. No.20/2016
PW-01

**ದಿನಾಂಕ: 19/04/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ರವರ ಪರ ಶ್ರೀಮತಿ.ಡಿ.ಆರ್.ಬಿ. ವಕೀಲರಿಂದ:**

ನಾನು ಈಗ ಕೆಲವು ದಿನಗಳಿಂದ ಹೈದ್ರಾಬಾದಿನಲ್ಲಿ ವಾಸವಾಗಿದ್ದೇನೆ. ನಾನು ಹಣ್ಣಿನ ವ್ಯಾಪಾರ ಮಾಡುತ್ತೇನೆ. ನಾನು 15 ವರ್ಷಗಳಿಂದ ಹಣ್ಣಿನ ವ್ಯಾಪಾರ ಮಾಡುತಿದ್ದೇನೆ. ನನ್ನ ತಂದೆಯವರಿಗೆ ಮೂರು ಜನ ಅಣ್ಣ ತಮ್ಮಂದಿರು ಅವರ ಹೆಸರು ಅಲೀಲ ಸಾಬ, ಸರದಾರ ಸಾಬ ಮತ್ತು ಅಲಾವುದ್ದಿನ್ ಇರುತ್ತಾರೆ. ನಾವು ನಾಲ್ಕು ಜನ ಅಣ್ಣ ತಮ್ಮಂದಿರು. ಮಸ್ತಾನ ಸಾಬ ರವರು ನನ್ನ ಅಜ್ಜ. ಮಸ್ತಾನ ಸಾಬ ರವರಿಗೆ ಮೂರು ಜನ ಮಕ್ಕಳು ಅವರು ಅಜೀಜಸಾಬ, ಸರದಾರ ಸಾಬ ಮತ್ತು ಅಲ್ಲಾವುದ್ದಿನ್.

ಖಾಸಿಮಸಾಬ ಇವರು ನನ್ನ ಅಜ್ಜನ ತಮ್ಮ. ಖಾಸಿ ಮಸಾಬ ರವರ ತಂದೆಯ ಹೆಸರು ಮೊಹ್ಮದಸಾಬ. ಮಸ್ತಾನಸಾಬ ರವರ ತಂದೆಯ ಹೆಸರು ಮೊಹ್ಮದಸಾಬ. ಸರ್ವೆ ನಂಃ166/2 ರಲ್ಲಿ ಇರುವ 4-ಎಕರೆ 18-ಗುಂಟೆ ಖಾಸಿಮಸಾಬ ರವರ ಹೆಸರಿನಲ್ಲಿ ದಾಖಲಾಗಿದ್ದು ಆಕಾರ ಬಂಧ ಮತ್ತು ಫಾರ್ಮ ನಂ.10 ಅವರ ಹೆಸರಲ್ಲಿದ್ದು ಎಲ್ಲಾ ದಾಖಲಾತಿಗಳು ಅವರ ಹೆಸರಲ್ಲಿ ಇದ್ದು ಅವರೆ ಮಾಲೀಕರು ಮತ್ತು ಕಬಜೆ ವಹಿವಾಟಿಯಲ್ಲಿದ್ದಾರೆ ಎಂದರೆ ಸರಿಯಲ್ಲ. ಖಾಸಿಮಸಾಬ ರವರು ಸರ್ವೆ ನಂಃ166/2 ರಲ್ಲಿ 4-ಎಕರೆ 18-ಗುಂಟೆ ಕಂತಯ್ಯ ಸ್ವಾಮಿಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು 4-ಎಕರೆ 7-ಗುಂಟೆ ಮಾತ್ರ ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ.

ಆ ರೀತಿ ಖಾಸಿಮಸಾಬ ರವರು ಕಂತಯ್ಯ ಸ್ವಾಮಿ ರವರಿಗೆ ಮಾರಾಟ ಮಾಡಿದ ನಂತರ ಅವರ ಹೆಸರಿನಲ್ಲಿಯೇ ಪಹಣಿಗಳು ಬರುತ್ತಿವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 4-ಎಕರೆ 7-ಗುಂಟೆಗೆ ಮಾತ್ರ ಪಹಣಿ ಬರುತ್ತಿದೆ ಎಂದು ನುಡಿಯುತ್ತಾರೆ. ಕಂತಯ್ಯ ಸ್ವಾಮಿ ರವರ ಮರಣದ ನಂತರ 4-ಎಕರೆ 18-ಗುಂಟೆ ಅವರ ಮಗ ಷಣ್ಮುಖಯ್ಯ ರವರ ಹೆಸರಿನಲ್ಲಿ ಪಹಣಿ ದಾಖಲಾಗಿದೆ ಎಂದರೆ ಸಾಕ್ಷಿ ಮುಂದುವರಿದು

**4-ಎಕರೆ 7-ಗುಂಟೆ ಮಾತ್ರ ಆಗಿದೆ ಎಂದು ನುಡಿಯುತ್ತಾರೆ. ಸರ್ವೆ ನಂಃ166/2 ರಲ್ಲಿ 4-ಎಕರೆ 18-ಗುಂಟೆಯನ್ನು ಷಣ್ಮುಖಯ್ಯ ರವರು ಸಂಗಪ್ಪ ರವರಿಗೆ 1965 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ನಿಜ, ಸಾಕ್ಷಿ ಮುಂದುವರಿದು 4-ಎಕರೆ 7-ಗುಂಟೆ ಮಾತ್ರ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.**

**ಸಂಗಪ್ಪ ಮರಣ ಹೊಂದಿದ ನಂತರ ಅವರ ವಾರಸುದಾರ ರಾದಂತಹ ಜಗನ್ನಾಥ ರವರ ಹೆಸರಿನಲ್ಲಿ 4-ಎಕರೆ 18-ಗುಂಟೆ ದಾಖಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಮಗೆ ಗೊತ್ತಿಲ್ಲದೆ ದಾಖಲೆ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ.**

**(ಈ ಹಂತದಲ್ಲಿ ನ್ಯಾಯಾಲಯದ ಕಾಲವಕಾಶ ಮುಗಿದಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ**

**ಜೆ.ಎಮ್. ಎಫ.ಸಿ ನ್ಯಾಯಾಧೀಶರು**
**ಭಾಲ್ಕಿ.**